# ಚಿಣ್ಣರ ಅಂಗಳ (ವಸತಿ ಸಹಿತ / ವಸತಿ ರಹಿತ)

## 1. ಪರಿಕಲ್ಪನೆ :

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರುವುದು, ಸಾರ್ವತ್ರಿಕ ಅವಕಾಶ ಮತ್ತು ಧಾರಣದ ದೃಷ್ಟಿಯಿಂದ ಅಗತ್ಯವಿದೆ. ಈ ಮಕ್ಕಳು ಹೆಚ್ಚಾಗಿ ಶಾಲೆಗಳ ಹೊರಗಿನ ಚಟುವಟಿಕೆಗಳಿಗೆ ಹೊಂದಿಕೊಂಡಿದ್ದು, ಶಾಲೆಗೆ ಸೇರಿ ಬಿಟ್ಟವರೂ ಕೂಡ ಕಲಿತಿರುವುದನ್ನು ಮರೆತಿರುತ್ತಾರೆ. ನೇರವಾಗಿ ಔಪಚಾರಿಕ ಶಾಲೆಗಳಿಗೆ ದಾಖಲಿಸುವುದರಿಂದ, ಶಾಲೆಯ ಚಟುವಟಿಕೆ ಮತ್ತು ಕಲಿಕೆಯ ವಿಧಾನಗಳಿಗೆ ಹೊಂದಿಕೊಳ್ಳಲು ಈ ಮಕ್ಕಳಿಗೆ ಕಷ್ಟವಾಗಬಹುದು. ಇವರಿಗೆ ಶಾಲೆ ಆಕರ್ಷಣೀಯವಾಗದೆ ಶಾಲೆಯಿಂದ ವಿಮುಖರಾಗುವ ಸಾಧ್ಯತೆಗಳಿವೆ. ಆದ್ದರಿಂದ ಇಂತಹ ಮಕ್ಕಳನ್ನು ನೇರವಾಗಿ ಶಾಲೆಗಳಿಗೆ ದಾಖಲಿಸುವುದಕ್ಕಿಂತ ಮೊದಲು ಸೇತಬಂಧ ಕಾರ್ಯಕ್ರಮ ನಡೆಸಿ ಅವರಲ್ಲಿನ ಪ್ರಾರಂಭಿಕ ಸಾಮರ್ಥ್ಯಗಳನ್ನು ಗುರುತಿಸುವ ಚಟುವಟಿಕೆ ಆಧಾರಿತವಾಗಿ ಮತ್ತು ಆನಂದದಾಯಕವಾಗಿ ಕಲಿಸುವ ಶಾಲಾ ಶಿಕ್ಷಣದಲ್ಲಿ ಆಸಕ್ತಿ ಮೂಡಿಸುವ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗುವಂತೆ ಪ್ರೇರೇಪಿಸುವ ಕಾರ್ಯಕ್ರಮವೇ "ಚಿಣ್ಣರ ಅಂಗಳ" ಶಾಲೆಗೆ ಸೇರಿದ ಮತ್ತು ಶಾಲೆ ತೊರೆದ ಮಕ್ಕಳು ಬೇಸಿಗೆಯಲ್ಲಿ ಒಂದು ನಿರ್ದಿಷ್ಟ ಶಾಲೆ ಕಡೆಗೆ ಆಕರ್ಷಿತರಾಗಿ ಸೇರಿ ಸಂತಸದಿಂದ ಹಾಡುತ್ತಾ ನಲಿಯುತ್ತಾ ಕಡಿಮೆ ಸಮಯದಲ್ಲಿ ಕಲಿಕೆಯ ಕನಿಷ್ಠ ಸಾಮರ್ಥ್ಯಗಳನ್ನು ಗಳಿಸಲು ಮತ್ತು ಶಿಕ್ಷಣವನ್ನು ಮುಂದುವರೆಸಲು ಅವಕಾಶ ಕಲ್ಪಿಸುವ ದೃಷ್ಟಿಯಿಂದ, ಚಿಣ್ಣರ ಅಂಗಳ ಕೇಂದ್ರಗಳನ್ನು ಅವಶ್ಯಕತೆ ಇರುವ ಸ್ಥಳಗಳಲ್ಲಿ ತೆರೆಯಲಾಗುತ್ತಿದೆ.

## 2. ಉದ್ದೇಶ :

- ಸಮೀಕ್ಷೆಯಿಂದ ಗುರುತಿಸಲಾದ ಅಥವಾ ನಂತರದಲ್ಲಿ ಶಾಲೆಯಿಂದ ಹೊರಗುಳಿದವರೆಂದು ಕಂಡುಬರುವ 7 ರಿಂದ 14 ವಯಸ್ಸಿನ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಈ ಕೇಂದ್ರಗಳಿಗೆ ಸೇರಿಸಿ, ಕಲಿಕೆಯಲ್ಲಿ ಆಸಕ್ತಿಯನ್ನು ಮೂಡಿಸುವುದು.
- ಆಸಕ್ತಿದಾಯಕವಾದ ಆಟ, ಹಾಡು, ಕಥೆಗಳು, ಸೃಜನಾತ್ಮಕ ಚಟುವಟಿಕೆಗಳ ಮೂಲಕ ಕಿರಿಯ ಪ್ರಾಥಮಿಕ ಹಂತದ ಕಲಿಕೆಯ ಬುನಾದಿ, ಸಾಮರ್ಥ್ಯಗಳಲ್ಲಿ ಪ್ರಭುತ್ವ ತರುವುದು.
- ಔಪಚಾರಿಕ ಶಾಲೆಗಳಿಗೆ ಸೇರಲು - ಇರುವ ಹಿಂಜರಿಕೆಯನ್ನು ಹೋಗಲಾಡಿಸುವುದು.

## 3. ವ್ಯಾಪ್ತಿ :

- ಚಿಣ್ಣರ ಅಂಗಳ ಕಾರ್ಯಕ್ರಮವು ಶಾಲೆ ಬಿಟ್ಟಂತಹ ಹಾಗೂ ಶಾಲೆಗೆ ಸೇರಿಲ್ಲದ ಮಕ್ಕಳಿಗಾಗಿ ಸೇತುಬಂಧ ಶಿಕ್ಷಣವಾಗಿದೆ.
- 7 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ ಗಂಡು ಮತ್ತು ಹೆಣ್ಣು ಮಕ್ಕಳನ್ನು ಕಾರ್ಯಕ್ರಮದಡಿ ಒಳವಡಿಸುವುದು. ಆದರೂ ಇದು ಕಿರಿಯ ಹಂತದ (07-11) ಮಕ್ಕಳಿಗೆ ಯುಕ್ತ.
- ವಸತಿಯುತ ಕಾರ್ಯಕ್ರಮದಡಿಯಲ್ಲಿ ದೂರದ ಪ್ರದೇಶಗಳ ಮಕ್ಕಳನ್ನು ಒಳವಡಿಸಬಹುದಾಗಿದೆ. ವಸತಿರಹಿತ ಕಾರ್ಯಕ್ರಮಕ್ಕೆ ಪ್ರತಿದಿನ ಶಾಲೆಗೆ ಹಾಜರಾಗಲು ಸಾಧ್ಯವಾಗುವ ಮಕ್ಕಳಿಗೆ ಮಾತ್ರ ಅವಕಾಶ ಕಲ್ಪಿಸುವುದು.
- ಶಾಲೆಯಿಂದ ಹೊರಗುಳಿದ ಕನಿಷ್ಠ 10 ಮಕ್ಕಳನ್ನು ಪ್ರತಿ ಕೇಂದ್ರ ಹೊಂದಿರಬೇಕು. ಒಂದು ವೇಳೆ 10 ಕ್ಕಿಂತ ಕಡಿಮೆ ಮಕ್ಕಳು ಇದ್ದರೆ ಸಮೀಪದ ಚಿಣ್ಣರ ಅಂಗಳ ಕೇಂದ್ರಕ್ಕೆ ದಾಖಲಿಸುವುದು. ವಿನಾಯಿತಿ - ಕಠಿಣ ಸನ್ನಿವೇಶಗಳಲ್ಲಿ 10 ಕ್ಕಿಂತ ಕಡಿಮೆ ಮಕ್ಕಳಿದ್ದರೂ ಕೇಂದ್ರ ನಡೆಸಬಹುದಾದರೂ ಪ್ರತಿ ಮಗುವಿಗೆ ತಗಲುವ ಘಟಕ ವೆಚ್ಚ ಮೀರತಕ್ಕದ್ದಲ್ಲ.
- ಒಂದು ಕೇಂದ್ರದಲ್ಲಿ 25 ಮಕ್ಕಳಿಗಿಂತ ಹೆಚ್ಚು ಮಕ್ಕಳು ಇರುವಲ್ಲಿ ಹೆಚ್ಚು ಕೇಂದ್ರಗಳನ್ನು ತೆರೆಯಬಹುದು.
- 11 ರಿಂದ 14 ವಯೋಮಾನದ ಮಕ್ಕಳಿಗೆ ವಸತಿಸಹಿತ ಚಿಣ್ಣರ ಅಂಗಳದಲ್ಲಿ ಪ್ರಾಮುಖ್ಯತೆ ನೀಡಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ಕಡಿಮೆ ವಯಸ್ಸಿನ ಮಕ್ಕಳನ್ನು ಪರಿಗಣಿಸಬಹುದಾಗಿದೆ.

## 4. ಕಾರ್ಯಕ್ರಮವನ್ನು ಎಲ್ಲಿ / ಯಾರಿಗಾಗಿ ಪ್ರಾರಂಭಿಸಬಹುದು

- ಹೆಚ್ಚಿನ ಸಂಖ್ಯೆಯಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳಿರುವ ಜನ ವಸತಿಯ ಶಾಲೆಗಳನ್ನು ಕೇಂದ್ರವಾಗಿ ಆಯ್ಕೆ ಮಾಡುವುದು
- ವಸತಿಯುತ ಕಾರ್ಯಕ್ರಮಕ್ಕೆ ಅನುಕೂಲಕರವಾದ ವಾತಾವರಣವುಳ್ಳ ಶಾಲೆಗಳಲ್ಲಿ, ಎಸ್.ಸಿ/ಎಸ್.ಟಿ./ಬಿ.ಸಿ.ಎಂ. ಹಾಸ್ಟೆಲ್‌ಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳುವುದು ಉತ್ತಮ.
- 7 ರಿಂದ 14 ವಯೋಮಾನದ ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಈ ಕೇಂದ್ರಗಳಿಗೆ ದಾಖಲು ಮಾಡುವುದು ಉಚಿತ.
- ಹೆಣ್ಣು ಮತ್ತು ಗಂಡು ಮಕ್ಕಳಿಗೆ ಪ್ರತ್ಯೇಕವಾದ ವಸತಿ ಸೌಲಭ್ಯ ಒದಗಿಸುವುದು.
- ದೂರದ ಊರುಗಳಿಂದ ಬರುವ ಮಕ್ಕಳನ್ನು ಕರೆದು ತಂದು ಮತ್ತೆ ಕರೆದೊಯ್ಯಲು ಎಸ್ಕಾರ್ಟ್‌ಗಳನ್ನು ನೇಮಿಸಲು ಗ್ರಾಮದ ಎಸ್.ಡಿ.ಎಂ.ಸಿ.ಗೆ ವಹಿಸುವುದು. (ಎಸ್ಕಾರ್ಟ್‌ಗಳಿಗೆ ಗೌರವಧನ ನೀಡಲು ಅವಕಾಶವಿಲ್ಲ)
- ಕೆ.ಜಿ.ಬಿ.ವಿ., ಮತ್ತು ಎನ್.ಪಿ.ಇ.ಜಿ.ಇ.ಎಲ್ ಕಾರ್‍ಯಕ್ರಮವು ಜಾರಿಯಲ್ಲಿರುವ ಬ್ಲಾಕ್‌ಗಳಲ್ಲಿ ತಪ್ಪದೆ ಈ ಕಾರ್‍ಯಕ್ರಮವನ್ನು ನಡೆಸುವುದು.

## 5. ಯಾರು ನಡೆಸಬೇಕು ?

- ಸಂಬಂಧಿಸಿದ ಶಾಲೆಗಳ ಎಸ್.ಡಿ.ಎಂ.ಸಿ. ವತಿಯಿಂದ ಆ ಶಾಲೆಯ ಮುಖ್ಯ ಶಿಕ್ಷಕರ ಉಸ್ತುವಾರಿಯಲ್ಲಿ ಚಿಣ್ಣರ ಅಂಗಳ ಕಾರ್ಯಕ್ರಮ ನಡೆಸುವುದು. ಕೇಂದ್ರದಲ್ಲಿ ಬೋಧಿಸಲು ಶಿಕ್ಷಕರನ್ನು ನೇಮಿಸಬೇಕು.
- ಚಿಣ್ಣರ ಅಂಗಳ ಕೇಂದ್ರಗಳನ್ನು ಸರ್ಕಾರೇತರ ಸ್ವಯಂ ಸೇವಾ ಸಂಸ್ಥೆಗಳು ನಡೆಸಲು ಮುಂದೆ ಬಂದಲ್ಲಿ ಅವರಿಗೆ ವಹಿಸಬಹುದು.

## 6. ಶಿಕ್ಷಕರು ಮತ್ತು ಸ್ವಯಂ ಸೇವಕರ ನೇಮಕ

- ಚಿ. ಅಂ. ಕೇಂದ್ರಗಳಿಗೆ ಉತ್ತಮ ಅನುಭವವುಳ್ಳ ಆಸಕ್ತ ಶಿಕ್ಷಕರನ್ನು ನಿಯೋಜಿಸಿಕೊಳ್ಳುವುದು. ಅವರಿಗೆ ನಿಯಮಾನುಸಾರಗಳಿಕೆ ರಜೆ ಸೌಲಭ್ಯ ನೀಡುವುದು.
- ಡಿ.ಇ.ಡಿ / ಬಿ.ಇ.ಡಿ. ತರಬೇತಿ ಹೊಂದಿದ ಅಥವಾ ನಿವೃತ್ತ ಪ್ರಾಥಮಿಕ ಶಿಕ್ಷಕರನ್ನು ಸ್ವಯಂ ಸೇವಕರನ್ನಾಗಿ ತೆಗೆದುಕೊಳ್ಳುವುದು. ಸ್ವಯಂ ಸೇವಕರನ್ನು ಎನ್.ಜಿ.ಒಗಳ ಮೂಲಕ ನೇಮಿಸಿಕೊಳ್ಳುವುದು.
- ಒಂದು ಕೇಂದ್ರಕ್ಕೆ ಒಬ್ಬ ಶಿಕ್ಷಕರು ಮತ್ತು ಒಬ್ಬ ಸ್ವಯಂಸೇವಕರನ್ನು, ನೇಮಿಸಿಕೊಳ್ಳುವುದು. ಒಬ್ಬ ಅಡಿಗೆ ಸಹಾಯಕರನ್ನು ವಸತಿಯುತ ಕೇಂದ್ರಗಳಿಗೆ ನೇಮಿಸಿಕೊಳ್ಳುವುದು.

## 7. ಹಣಕಾಸು

- ಡಿ.ಡಿ.ಪಿ.ಐ ರವರು ತರಬೇತಿಗೆ ಸಂಬಂಧಿಸಿದ ಹಣವನ್ನು ಕ್ಲುಪ್ತ ಅವಧಿಯಲ್ಲಿ ಡಯಟ್ ಸಂಸ್ಥೆಗೆ ಬಿಡುಗಡೆ ಮಾಡುವುದು.
- ಸಿ.ಆರ್.ಸಿ. ಕೇಂದ್ರ ಸ್ಥಾನದ ಚಿಣ್ಣರ ಅಂಗಳ ಕೇಂದ್ರಗಳಿಗೆ ಅಗತ್ಯವಾದ ಅನುದಾನವನ್ನು ಸಿ.ಎ.ಇ.ಒ. ಖಾತೆಗೆ ಜಮಾ ಮಾಡುವುದು. ಅಗತ್ಯವೆನಿಸಿದ ಪ್ರಕರಣಗಳಲ್ಲಿ ಹಣವನ್ನು ಮುಖ್ಯ ಶಿಕ್ಷಕರ ಖಾತೆಗೆ ಬಿಡುಗಡೆ ಮಾಡಬಹುದು.
- ಕ್ಲಸ್ಟರ್ ಕೇಂದ್ರವನ್ನು ಹೊರತು ಪಡಿಸಿ ನಡೆಯುವ ಚಿಣ್ಣರ ಅಂಗಳ ಕೇಂದ್ರದ ಹಣವನ್ನು ಮುಖ್ಯ ಶಿಕ್ಷಕರ ಖಾತೆಗೆ ಜಮಾವಣೆ ಮಾಡಿ ಕೇಂದ್ರ ನಡೆಸಲು ವ್ಯವಸ್ಥೆಗೊಳಿಸಬೇಕು.
- ಶಾಲೆಯ ಮುಖ್ಯ ಶಿಕ್ಷಕರು ಕೇಂದ್ರ ನಿರ್ವಹಣೆಗೆ ಬೇಕಾದ ಅಗತ್ಯ ಸಾಮಗ್ರಿಗಳನ್ನು ನಿಯಮಾನುಸಾರ ಖರೀದಿಸಿ ಲೆಕ್ಕ ಪತ್ರ ನಿರ್ವಹಿಸುವರು. ಕೇಂದ್ರಗಳು ಸಮರ್ಪಕವಾಗಿ ನಡೆಯುವಂತೆ ಮುಖ್ಯ ಶಿಕ್ಷಕರು, ಉಸ್ತುವಾರಿಯನ್ನು ನಿರ್ವಹಿಸಬೇಕು. ಕಾರ್ಯನಿರ್ವಹಿಸಿದ ಶಿಕ್ಷಕರು ಮತ್ತು ಮುಖ್ಯ ಶಿಕ್ಷಕರಿಗೆ ಕೆ.ಸಿ.ಎಸ್.ಆರ್. ನಿಯಮ 113ರ ಉಪನಿಯಮ 3(ಎ) ಪ್ರಕಾರ ಗಳಿಕೆ ರಜೆ ಸೌಲಭ್ಯ ನೀಡುವುದು.

## 09-10ನೇ ಸಾಲಿನ ಘಟಕ ವೆಚ್ಚದ ವಿವರ (ಪರಿಷ್ಕೃತ ದರ)

ಘಟಕ ವೆಚ್ಚದ ಮರು ಹಂಚಿಕೆ (ಪ್ರತಿ ಮಗುವಿನ ಘಟಕ ವೆಚ್ಚ 2 ತಿಂಗಳ ಅವಧಿಗೆ)

| ವಿವರ | ವಸತಿ ರಹಿತ ಚಿಣ್ಣರ ಅಂಗಳ ಪ್ರತಿಮಗುವಿಗೆ - 500/- | ವಸತಿ ಸಹಿತ ಚಿಣ್ಣರ ಅಂಗಳ ಪ್ರತಿ ಮಗುವಿಗೆ ರೂ. 1666/- |
|---|---|---|
| ಸ್ವಯಂ ಸೇವಕರ ಗೌರವಧನ | 80 | 160 |
| ಉಪಹಾರ / ಊಟ | 300 | 1000 |
| ಲೇಖನ ಸಾಮಗ್ರಿ | 60 | 60 |
| ಕಲಿಕೆ ಬೋಧನೆ ಸಾಮಾಗ್ರಿ | 60 | 60 |
| ಸಹಾಯಕ - | - | 80 |
| ದೈನಂದಿನ ವಸ್ತುಗಳು | - | 60 |
| ಸಾದಿಲ್ವಾರು - | - | 40 |
| ಬೇಸಿಗೆ ಶಿಬಿರ ಸಾಂಸ್ಕೃತಿಕ ಕಾರ್ಯಕ್ರಮ | - | 206 |
| ಒಟ್ಟು | **500** | **1666** |

### 8. ತರಬೇತಿ

- ತರಬೇತಿಯ ಪೂರ್ಣ ಜವಾಬ್ದಾರಿ ಡಯಟ್‌ಗಳದಾಗಿರುತ್ತದೆ. ತರಬೇತಿಗೆ ಸಂಬಂಧಿಸಿದ ಹಣವನ್ನು ಕ್ಲುಪ್ತ ಅವಧಿಯಲ್ಲಿ ಡಯಟ್ ಸಂಸ್ಥೆಗಳಿಗೆ ಹಣ ಸೇರುವುದು.
- ತರಬೇತಿ ವೆಚ್ಚವನ್ನು ಕೆ.ಸಿ.ಎಸ್.ಆರ್. ನಿಯಮಾವಳಿಗಳಂತೆ ಎಸ್.ಎಸ್.ಎ. ಆಡಳಿತಾತ್ಮಕ ವೆಚ್ಚದಿಂದ ಭರಿಸಲು ಆದೇಶಿಸಿದೆ (31.12.2004 ರಂದು ನಡೆದ ಇ.ಸಿ. ನಡಾವಳಿ 2 ರಂತೆ ಈ ತರಬೇತಿಯು ತಾಲ್ಲೂಕಿನ ಹೊರಗೆ ನಡೆಯುವುದರಿಂದ ನೀಡಬಹುದು)

### 9. ವಾತಾವರಣ ನಿರ್ಮಾಣ :

- ಚಿಣ್ಣರ ಅಂಗಳ ಕೇಂದ್ರದ ಶಿಕ್ಷಕರು / ಸ್ವಯಂ ಸೇವಕರು / ಎಸ್.ಡಿ.ಎಂ.ಸಿ ಸದಸ್ಯರು / ಶಿಕ್ಷಣಾಸಕ್ತರು, ಕೇಂದ್ರದ ಜನವಸತಿ ಪ್ರದೇಶದಲ್ಲಿ ಚಿಣ್ಣರ ಅಂಗಳ ಕೇಂದ್ರಕ್ಕೆ ಆಯ್ಕೆಯಾದ ಮಕ್ಕಳ ಮನೆಮನೆಗೆ ಭೇಟಿ ಕೊಟ್ಟು ಕುಟುಂಬದೊಡನೆ ಸಂವಾದ ನಡೆಸಿ ಅವರಲ್ಲಿ ಜಾಗೃತಿ ಮೂಡಿಸಬೇಕು.
- ಚಿಣ್ಣರ ಅಂಗಳಕ್ಕೆ ಆಯ್ಕೆಯಾದ ಮಕ್ಕಳನ್ನು, ಜನವಸತಿ ಪ್ರದೇಶದ ಶಾಲೆಗೆ ಆಹ್ವಾನಿಸಿ, ಮಕ್ಕಳ ಜೊತೆ ಬೆರೆಯುವಂತೆ ಮಾಡಬೇಕು.
- ಜನವಸತಿ ಪ್ರದೇಶಗಳಲ್ಲಿ ಸಮುದಾಯದೊಡನೆ ಮೇಳಗಳನ್ನು ಏರ್ಪಡಿಸಬೇಕು.
- ಗ್ರಾಮ ಸಭೆ ಕರೆದು, ಚಿಣ್ಣರ ಅಂಗಳಕ್ಕೆ ಆಯ್ಕೆಯಾದ ಮಕ್ಕಳನ್ನು ಅವರು ಅಂಗಳಕ್ಕೆ ನಿರಂತರವಾಗಿ ಹಾಜರಾಗುವಂತೆ ಸಭೆಯಲ್ಲಿ ಚರ್ಚಿಸಿ ಸಲಹೆಗಳನ್ನು ಪಡೆಯಬೇಕು. ಮಕ್ಕಳ ಹಾಜರಾತಿಯ ಬಗ್ಗೆ ವಿಶೇಷ ನಿಗಾವಹಿಸಲು ಜವಾಬ್ದಾರಿ ಹಂಚಬೇಕು.
- ಚಿಣ್ಣರ ಅಂಗಳ ನಡೆಯುವಾಗ ವಾರಕ್ಕೊಮ್ಮೆ ಎಸ್.ಡಿ.ಎಂ.ಸಿ. ಸಭೆ ನಡೆಸಿ, ಜಾಥಾಗಳನ್ನು ಹಮ್ಮಿಕೊಂಡು ಮಕ್ಕಳು ಚಿಣ್ಣರ ಅಂಗಳಕ್ಕೆ ಪ್ರತಿ ದಿನ ಬರುವಂತೆ, ಬಂದು ಕಲಿಯುವಂತೆ ಪ್ರೇರೇಪಿಸಬೇಕು.

**11. ಬೋಧಿಸಬೇಕಾದ ಪಠ್ಯವಸ್ತು :**

- ಚಿಣ್ಣರ ಅಂಗಳ ಪುಸ್ತಕಗಳನ್ನು ಇಲ್ಲಿ ಬಳಸುವುದು
- ಮೂಲ ಸಾಮರ್ಥ್ಯಗಳ ಗಳಿಕೆಗೆ ಹೆಚ್ಚು ಅವಕಾಶ. ಸೃಜನಶೀಲತೆಗೆ ಆದ್ಯತೆ
- ಸಾಮಾನ್ಯ ಜ್ಞಾನಕ್ಕೆ ಪ್ರಾಮುಖ್ಯತೆ
- ಅಗತ್ಯವಿದ್ದಲ್ಲಿ ಹಿರಿಯರ ಚಿಣ್ಣರ ಅಂಗಳ ಪುಸ್ತಕ.

**12. ವೇಳಾಪಟ್ಟಿ**

| | | |
|---|---|---|
| 1ನೇ ದಿನದಿಂದ 7ನೇ ದಿನ | – | ಕಲಿಕಾ ಪೂರ್ವ ಚಟುವಟಿಕೆಗಳು |
| 8 ನೇ ದಿನ | – | ಪೂರ್ವ ಪರೀಕ್ಷೆ ಮತ್ತು ಗುಂಪುರಚನೆ |

**8ನೇ ದಿನದಿಂದ 57ನೇ ದಿನದವರೆಗೆ**

| | | |
|---|---|---|
| ಬೆ. 8 – 8.15 | – | ಕಲಿಕಾ ಪೂರ್ವ ಚಟುವಟಿಕೆ |
| 8.15 – 10.00 | | ಕನ್ನಡ |
| 10.00 – 10.15 | | ವಿರಾಮ |
| 10.15 – 11.30 | | ಗಣಿತ |
| 11.30 – 12.30 | | ಇಂಗ್ಲೀಷ್ |
| 12.30 – 1.45 | | ಪರಿಸರ ಅಧ್ಯಯನ |
| 1.45 – 2.45 | | ಸಹ ಪಠ್ಯಚಟುವಟಿಕೆಗಳು (ವಸತಿ ರಹಿತ ಕೇಂದ್ರಗಳಲ್ಲಿ ವಸತಿ ಸಹಿತ ಕೇಂದ್ರಗಳಲ್ಲಿ ಕಾರ್ಯಕ್ರಮ 3 ರಿಂದ 5 ರವರೆಗೆ ನಡೆಯುತ್ತದೆ) |

58 ನೇ ದಿನ ಸಾಫಲ್ಯ ಪರೀಕ್ಷೆ

59ನೇ ದಿನ ಪ್ರಮಾಣ ಪತ್ರವನ್ನು ಸಿದ್ಧಪಡಿಸುವುದು

60 ನೇ ದಿನ ಮಕ್ಕಳನ್ನು ಮುಖ್ಯವಾಹಿನಿಗೆ ಸೇರಿಸುವುದು.

**ಸಾಂಸ್ಕೃತಿಕ ಕಾರ್ಯ ಕ್ರಮಗಳು**

ಸಾಂಸ್ಕೃತಿಕ ಚಟುವಟಿಕೆಗಳು ಮನಸ್ಸಿಗೆ ಮುದ ನೀಡುತ್ತವೆ ಹಾಗೂ ಸಂಘಟಿತವಾಗಲು ಪ್ರೇರೇಪಿಸುತ್ತವೆ. ಯಾವುದೇ ವಿಷಯವನ್ನು ಕಲಿಯಲು, ಕಲಿತಿದ್ದನ್ನು ನೆನಪಿಟ್ಟುಕೊಳ್ಳಲು ಗೀತೆ, ಅಭಿನಯಗಳು ನೆರವಾಗುತ್ತವೆ ಹಾಗೂ ಸಮುದಾಯವನ್ನು ಸೆಳೆಯಲು ಸಾಂಸ್ಕೃತಿಕ ಚಟುವಟಿಕೆ ಒಂದು ಯಶಸ್ವೀ ಮಾಧ್ಯಮ. ಈ ಅಂಶವನ್ನು ಗಮನಿಸಿ ಚಿಣ್ಣರ ಅಂಗಳ ಕೇಂದ್ರಗಳಲ್ಲಿ ಕಲಿಕಾ ಪೂರಕ ಚಟುವಟಿಕೆಗೆ ಹೆಚ್ಚು ಗಮನ ನೀಡಲಾಗಿದೆ.

- ಕೇಂದ್ರ ಪ್ರಾರಂಭದ ಮೊದಲ ವಾರ ಸೃಜನಾತ್ಮಕ ಕ್ರಿಯಾತ್ಮಕ ಚಟುವಟಿಕೆ ಹಮ್ಮಿಕೊಳ್ಳಿ
- ವಸತಿ ರಹಿತ ಕೇಂದ್ರ ಪ್ರಾರಂಭಕ್ಕೆ ಮೊದಲ ಅರ್ಧ ಗಂಟೆ ಪೂರಕ ಚಟುವಟಿಕೆ ನಡೆಯಲಿ
- ವಸತಿಯುತ ಕೇಂದ್ರಗಳಲ್ಲಿ ಮಧ್ಯಾಹ್ನ 3 ರಿಂದ 5 ರವರೆಗೆ ಹಾಗೂ ವಸತಿ ರಹಿತ ಕೇಂದ್ರಗಳಲ್ಲಿ 2–15 ರಿಂದ 03–15ರವರೆಗೆ ಸಾಂಸ್ಕೃತಿಕ ಚಟುವಟಿಕೆಗಳ ತರಬೇತಿ ನೀಡಿ.
- ವಸತಿಯುತ ಕೇಂದ್ರಗಳಲ್ಲಿ ಸಂಜೆ 06.30 ರ ನಂತರ ಮಕ್ಕಳ ಅಭಿವ್ಯಕ್ತತೆಗೆ ಅವಕಾಶ ನೀಡಿ. ಅವರನ್ನು ಪ್ರೋತ್ಸಾಹಿಸಿ.
- ವಾರಕ್ಕೊಮ್ಮೆ ಸಂಜೆ ಕಾರ್ಯಕ್ರಮವೊಂದನ್ನು ಸಂಘಟಿಸಿ ಪೋಷಕರು ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆ ಮಾಡಿ.

- ಪ್ರತಿ 20 ದಿನಗಳಿಗೊಮ್ಮೆ ಮಕ್ಕಳ ಸಾಂಸ್ಕೃತಿಕ ಸಾಮೂಹಿಕ ಪ್ರದರ್ಶನವನ್ನು ಕಡ್ಡಾಯವಾಗಿ ಸಾರ್ವಜನಿಕರ ಎದುರು ಪ್ರದರ್ಶಿಸಿ.
- ಇದಕ್ಕೆ ಬೇಕಾದ ವೇದಿಕೆ ಸಜ್ಜುಗೊಳಿಸಲು, ಪಾತ್ರಧಾರಿಗಳ ವೇಷಭೂಷಣ, ಅಗತ್ಯವಾದ ಸಾಮಾಗ್ರಿಗಳನ್ನು ಪಡೆಯಲು ಇದಕ್ಕೆಂದೇ ನೀಡಿರುವ ಅನುದಾನವನ್ನು ಬಳಸಿ – ಕಾರ್ಯಕ್ರಮ ಯಶಸ್ವಿಗೊಳಿಸಿ.

## 14. ಕಲಿಕಾ ಪೂರ್ವ ಚಟುವಟಿಕೆಗಳು :

ಪ್ರಾರಂಭದ 7 ದಿನಗಳಲ್ಲಿ ಚಿಣ್ಣರ ಅಂಗಳದ ಆವರಣದಲ್ಲಿ ಮಕ್ಕಳೆಲ್ಲರನ್ನೂ ಸೇರಿಸಿ ಕೇಂದ್ರದ ಆವರಣವನ್ನು ಆಟದ ಸ್ಥಳವನ್ನಾಗಿ ಮಾಡಿಕೊಂಡು ಕ್ರೀಡಾ ವಿನೋದ ಕೇಂದ್ರದ ಅನುಭವವನ್ನು ಕಲ್ಪಿಸುವುದು. ಬೋಧಕರು ಈ ರೀತಿ ಮಾಡಲು, ಅನುಗುಣವಾದ ಮಾರ್ಗದರ್ಶನಗಳನ್ನು ಆಟಗಳು, ಹಾಡುಗಳು, ಕಥೆಗಳು, ಸೃಜನಶೀಲತೆಯ ಚಟುವಟಿಕೆಗಳು, ಒಗಟುಗಳು, ಚಿತ್ರ ಬರೆಯುವ ಚಟುವಟಿಕೆಗಳು ಮುಂತಾದವುಗಳನ್ನು ಅಳವಡಿಸುವುದು. (ಚಿಣ್ಣರ ಅಂಗಳ ಶಿಕ್ಷಕರ ಕೈಪಿಡಿಯಲ್ಲಿ ವಿವರಗಳನ್ನು ನೀಡಲಾಗಿದೆ.)

## 15. ಪೂರ್ವ ಪರೀಕ್ಷೆ :

ವಿವಿಧ ಕಲಿಕಾ ಮಟ್ಟಗಳುಳ್ಳ ಮಕ್ಕಳ ಕಲಿಕೆಗೆ ಪೂರಕವಾಗುವ ಮಾರ್ಗವನ್ನಾಯ್ದುಕೊಳ್ಳಲು ಪೂರ್ವಪರೀಕ್ಷೆ ಆಧಾರವಾಗುತ್ತದೆ. ಈ ಪರೀಕ್ಷೆಯನ್ನು ಬೋಧಕರೇ ಲಭ್ಯ ವಾತಾವರಣದಲ್ಲಿ ಮಾಡಬೇಕು. ಪೂರ್ವ ಪರೀಕ್ಷೆಗೆ ಬೇಕಾದ ಸಾಧನಗಳನ್ನು ಚಿಣ್ಣರ ಅಂಗಳ ಬೋಧಕರ ಕೈಪಿಡಿಯ ಅನುಬಂಧಗಳಲ್ಲಿ ಕೊಡಲಾಗಿದೆ. ಮೌಖಿಕ, ಚಟುವಟಿಕೆ ಆಧಾರಿತ ಹಾಗೂ ಬರಹದ ಸಾಧನಗಳ ಮೂಲಕ ನಡೆಸಲಾಗುವ ಈ ಪರೀಕ್ಷೆಯ ಪರಿಣಾಮವನ್ನು ಗ್ರೇಡ್‌ಗಳಲ್ಲಿ ನಿಗದಿಪಡಿಸಿ, ಕಡಿಮೆ ಸಾಮರ್ಥ್ಯ ಮಟ್ಟದ ಗುಂಪು ಹಾಗೂ ಹೆಚ್ಚಿನ ಸಾಮರ್ಥ್ಯ ಮಟ್ಟದ ಗುಂಪುಗಳು ವಿಂಗಡಿಸುವುದು.

## 16. ಗುಂಪುನಿರ್ವಹಣೆ :

ಪೂರ್ವ ಪರೀಕ್ಷೆಯ ನಂತರ ಮೊದಲ ಎರಡು ಮೂರು ದಿನಗಳು ಕಲಿಕೆಯ ಚಟುವಟಿಕೆಯನ್ನು ಒಟ್ಟು ಗುಂಪಿನಲ್ಲಿ ನೀಡಿ – ಗುಂಪುಗಳನ್ನು ಪರಿಷ್ಕರಿಸಿಕೊಳ್ಳುವುದು. ಇದಾದ ನಂತರ ಕಡಿಮೆ ಸಾಮರ್ಥ್ಯ ಮಟ್ಟದ ಮಕ್ಕಳ ಗುಂಪನ್ನು ಶಿಕ್ಷಕರೂ ಹೆಚ್ಚಿನ ಸಾಮರ್ಥ್ಯ ಮಟ್ಟದ ಮಕ್ಕಳ ಗುಂಪನ್ನು ಸ್ವಯಂ ಸೇವಕರೂ ನಿರ್ವಹಿಸಬಹುದಾಗಿದೆ.

- ಮೊದಲ 15 ನಿಮಿಷಗಳು ಹಾಗೂ ಕೊನೆಯ 15 ನಿಮಿಷಗಳನ್ನು ಅನೌಪಚಾರಿಕವಾಗಿ ಆಟ, ಹಾಡುಗಳಿಂದ ಪ್ರಾರಂಭಿಸಬೇಕು ಮತ್ತು ಮುಗಿಸಬೇಕು.
- ವಸತಿರಹಿತ ಕೇಂದ್ರಗಳಲ್ಲಿ ಅರ್ಧ ಗಂಟೆ ವಿರಾಮ ನೀಡಲಾಗುವುದು.
- ಮಕ್ಕಳ ಆಸಕ್ತಿ, ಕಲಿಕೆಯ ವೇಗವನ್ನಾಧರಿಸಿ ಕಾಲಾವಧಿ ಹೆಚ್ಚಿಸಿಕೊಳ್ಳಬಹುದಾಗಿದೆ.
- ಪ್ರತಿ ವಿಷಯವನ್ನು ಚಟುವಟಿಕೆಗಳ ಮೂಲಕ ನಿರ್ವಹಿಸಬೇಕು
- ಚಿಣ್ಣರ ಅಂಗಳ – ಬೋಧಕರ ಕೈಪಿಡಿಯಲ್ಲಿ ನೀಡಲಾಗಿರುವ ನಮೂನೆಯಂತೆ ಕನಿಷ್ಠ, ವಾರಕ್ಕೊಮ್ಮೆ ಮಕ್ಕಳ ಕಲಿಕೆಯ ಮೌಲ್ಯಮಾಪನ ಮಾಡಿ ದಾಖಲಿಸಬೇಕು.
- ವಸತಿಯುತ ಕೇಂದ್ರಗಳಲ್ಲಿ ಮಕ್ಕಳಿಗೆ ವ್ಯಾಯಾಮ, ಯೋಗ, ಪ್ರಾರ್ಥನೆಗಳಂತಹ ಚಟುವಟಿಕೆಗಳನ್ನು ಅಳವಡಿಸಿ ಮಕ್ಕಳಿಗೆ ಪ್ರೋತ್ಸಾಹ ನೀಡುವುದು.

## 17. ಸಾಫಲ್ಯ ಪರೀಕ್ಷೆ :

58ನೇ ದಿನ ಸಾಫಲ್ಯ ಪರೀಕ್ಷೆಯನ್ನು ಮಕ್ಕಳಿಗೆ ಮಾಡಬೇಕು. ಸಾಫಲ್ಯ ಪರೀಕ್ಷೆಯನ್ನು ಚಿಣ್ಣರ ಅಂಗಳದ ಶಿಕ್ಷಕ ನಡೆಸಬೇಕು. ಸಾಫಲ್ಯ ಪರೀಕ್ಷೆಯ ಸಾಧನಗಳನ್ನು ಚಿಣ್ಣರ ಅಂಗಳ ಬೋಧಕರ ಕೈಪಿಡಿಯ ಅನುಬಂಧದಲ್ಲಿ ಕೊಟ್ಟಿದೆ. ಪರೀಕ್ಷೆಯಿಂದ ಮಗುವಿನ

ಮೌಲ್ಯಮಾಪನವನ್ನು ಮಾಡಿ ಮಗುವಿನ ಸಾಮರ್ಥ್ಯದ ಗಳಿಕೆಯ ಮಟ್ಟವನ್ನು ಮಗು ಸೇರಬೇಕಾದ ತರಗತಿಯನ್ನು ನಿಶ್ಚಯಿಸಿ ದಾಖಲು ಮಾಡಬೇಕು. ದಾಖಲಾದ ಮಕ್ಕಳು ನಿರಂತರವಾಗಿ ಶಾಲೆಗೆ ಹಾಜರಾಗಿ ಕಲಿಕೆಯಲ್ಲಿ ನಿರತರಾಗುವಂತೆ ಗಮನಹರಿಸಬೇಕು.

## 18. ಬೋಧನೆ ಕಲಿಕಾ ಸಾಮಗ್ರಿ :

ಕಲಿಕೋಪಕರಣಕ್ಕಾಗಿ ಅನುದಾನ ಬಳಕೆಗೆ ಅವಕಾಶವಿದೆ. ತರಗತಿ ಬೋಧನೆಯಲ್ಲಿ ಅವಶ್ಯ ಕಲಿಕೋಪಕರಣಗಳ ತಯಾರಿಕೆಗೆ ಕಚ್ಚಾ ವಸ್ತುಗಳನ್ನು ಖರೀದಿಸುವುದಲ್ಲದೆ, ಸಮುದಾಯದಿಂದ ಕಲಿಕೋಪಕರಣಗಳನ್ನು ದಾನವಾಗಿ ಪಡೆಯುವ ಪ್ರಯತ್ನ ಮಾಡಬೇಕು. ಶಾಲೆಗಳಲ್ಲಿ ಈಗಾಗಲೇ ಬಳಸಲಾಗುತ್ತಿರುವ ಇಂತಹ ಸಾಮಾಗ್ರಿಗಳನ್ನು ಈ ಕೇಂದ್ರಗಳಲ್ಲಿ ಬಳಕೆ ಮಾಡುವ ವ್ಯವಸ್ಥೆ ಮಾಡುವುದು. ಶಿಕ್ಷಕರು ಮತ್ತು ಸ್ವಯಂ ಸೇವಕರು, ಇಬ್ಬರೂ ಈ ಕಲಿಕೋಪಕರಣಗಳನ್ನು ಬಳಸಿ ಬೋಧನಾ ಕಲಿಕಾ ಪ್ರಕ್ರಿಯೆ ಪರಿಣಾಮಕಾರಿಯನ್ನಾಗಿಸಲು ಪ್ರಯತ್ನಿಸಬೇಕು.

"ಸ್ಥಳೀಯ ಪ್ರತಿಭಾವಂತರನ್ನು ಗುರುತಿಸಿ ಅವರಿಂದ ಕಥೆ, ಒಗಟು ಹೇಳಿಸುವುದು ನಾಟಕ ಮಾಡಿಸುವುದು ಮತ್ತು ಜನಪದ ಗೀತೆ ಹಾಡುವುದರ ಮೂಲಕ ಸಮುದಾಯವನ್ನು ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುವುದು."

## 19. ನಿರ್ವಹಿಸಬೇಕಾದ ದಾಖಲೆಗಳು :

**ಆಡಳಿತ ದಾಖಲೆಗಳು**

1. ಸಮೀಕ್ಷೆಯ ವಿವರಗಳನ್ನೊಳಗೊಂಡ ವಹಿ
2. ದಾಖಲಾತಿ ವಹಿ
3. ಹಾಜರಾತಿ ವಹಿ – ಶಿಕ್ಷಕರ, ಸ್ವಯಂ ಸೇವಕರ ಹಾಗೂ ವಿದ್ಯಾರ್ಥಿಗಳ
4. ಹಣಕಾಸು ನಿರ್ವಹಣಾ ವಹಿ
5. ದಾಸ್ತಾನು ವಹಿ. ವಿತರಣಾ ವಹಿ
6. ಭೇಟಿ ಪುಸ್ತಕ (ಸಂದರ್ಶಕರ ವಹಿ)

**ಶೈಕ್ಷಣಿಕ ದಾಖಲೆಗಳು**

1. ಪೂರ್ವ ಪರೀಕ್ಷೆ ಹಾಗೂ ಸಾಫಲ್ಯ ಪರೀಕ್ಷೆಗಳ (ಪ್ರಶ್ನೆ ಪತ್ರಿಕೆ / ಉತ್ತರ ಪತ್ರಿಕೆ) ದಾಖಲೆಗಳು.
2. ಸಾಪ್ತಾಹಿಕ ಪ್ರಗತಿ ನಮೂನೆಗಳು ಮತ್ತು ದಾಖಲೆಗಳು.
3. ಶಿಕ್ಷಕರ ಹಾಗೂ ಸ್ವಯಂ ಸೇವಕರ ದಿನಚರಿ.
4. ಟಿ.ಎಲ್.ಎಮ್. ನಿರ್ವಹಣಾ ವಹಿ

## 20. ಉಸ್ತುವಾರಿ :

- ವಾರಕ್ಕೊಮ್ಮೆ ಎಸ್.ಡಿ.ಎಂ.ಸಿ. ಜೊತೆ ಸಭೆ ಸೇರಿ ಪ್ರಗತಿಯನ್ನು ಪರಿಶೀಲಿಸಿ ಸೂಕ್ತವಾದ ನಿರ್ಧಾರಗಳನ್ನು ಕೈಗೊಳ್ಳುವುದು.
- ವಾರಕ್ಕೆರಡು ಬಾರಿ ಸಿ.ಎ.ಇ.ಓ ಸಂಪನ್ಮೂಲ ವ್ಯಕ್ತಿಗಳು ಅಂಗಳಕ್ಕೆ ಭೇಟಿಕೊಟ್ಟು ಒಂದು ಭೇಟಿಯಲ್ಲಿ ಪೂರ್ಣ ದಿನ ಅಲ್ಲೇ ಇದ್ದು ಅಂಗಳದ ಕೆಲಸದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು.
- ಸಂಪನ್ಮೂಲ ವ್ಯಕ್ತಿಗಳು, ಶಿಕ್ಷಣ ಸಂಯೋಜಕರು, ಕನಿಷ್ಠ 6 ದಿನಗಳಿಗೊಮ್ಮೆ ಕೇಂದ್ರಕ್ಕೆ ಭೇಟಿ ನೀಡುವಂತೆ ಬಿ.ಆರ್.ಸಿ.ಯವರು ವ್ಯವಸ್ಥೆ ಮಾಡಬೇಕು.
- ವಸತಿಯುತ ಕೇಂದ್ರಗಳಿಗೆ ಬ್ಲಾಕ್ ಹಂತದ ಸಂಪನ್ಮೂಲ ವ್ಯಕ್ತಿಗಳು ವಾರಕ್ಕೊಮ್ಮೆಯಾದರೂ ಭೇಟಿ ನೀಡುವ ವ್ಯವಸ್ಥೆಯಾಗಬೇಕು.
- ಮೇಲ್ಕಂಡ ಎಲ್ಲರೂ ಸಹ ಚಿಣ್ಣರ ಅಂಗಳ ಕೇಂದ್ರಗಳ ಪ್ರಾರಂಭದ ಪೂರ್ವದಲ್ಲಿ ನಡೆಸಲಾಗಿರುವ ಸಿದ್ಧತೆಗಳ ಪರಿಶೀಲನೆಯನ್ನು ಸ್ಥಳಕ್ಕೆ ಭೇಟಿ ಮಾಡುವುದುರ ಮೂಲಕ ನಡೆಸಬೇಕು.

- ಜಿಲ್ಲಾ ಕಛೇರಿಯ ಡಿ.ವೈ.ಪಿ.ಸಿ. ವಿಷಯ ಪರಿವೀಕ್ಷಕರು ಹಾಗೂ ಶಿಕ್ಷಣಾಧಿಕಾರಿಗಳಿಗೆ ಜಿಲ್ಲೆಯಲ್ಲಿನ ಒಟ್ಟು ಚಿಣ್ಣರ ಅಂಗಳ ಕೇಂದ್ರಗಳನ್ನು ಹಂಚಿಕೆ ಮಾಡಿ ನೀಡುವುದು. ಈ ಎಲ್ಲಾ ಕೇಂದ್ರಗಳನ್ನು ಕನಿಷ್ಠ ಎರಡು ಬಾರಿ ಭೇಟಿ ಮಾಡುವುದು.
- ತಿಂಗಳಿನಲ್ಲಿ ಡಯಟ್ ಉಪನ್ಯಾಸಕರು, ತಲಾ 10 ಕೇಂದ್ರಗಳನ್ನು ಡಯಟ್ ಪ್ರಾಂಶುಪಾಲರು ಮತ್ತು ಉಪನಿರ್ದೇಶಕರು (ಆಡಳಿತ) ಇವರು ಕನಿಷ್ಠ ತಲಾ 10 ಕೇಂದ್ರಗಳಿಗೆ ಭೇಟಿ ನೀಡಬೇಕು. ಇವುಗಳಲ್ಲಿ ಶೇ. 50 ರಷ್ಟು ವಸತಿಯುತ ಕೇಂದ್ರಗಳಾಗಿರಬೇಕು.
- ಚಿಣ್ಣರ ಅಂಗಳ 2005ರ ಮಾರ್ಗಸೂಚಿಯಲ್ಲಿನ ನಮೂನೆ 1 ರಿಂದ 5 ರವರೆಗಿನ ವರದಿಗಳನ್ನು ಕೆಳಗಿನಂತೆ ಕಳುಹಿಸಬೇಕು.
- ಸನಿವಾಸ ಚಿಣ್ಣರ ಅಂಗಳ ಕೇಂದ್ರಗಳಿಗೆ ನಸುಕಿನಲ್ಲಿ ಅಥವಾ ರಾತ್ರಿ ವೇಳೆಯಲ್ಲಿಯೂ ಭೇಟಿನೀಡಿ.

## 21. ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆ :

ಚಿಣ್ಣರ ಅಂಗಳ ಕೇಂದ್ರಗಳನ್ನು ಸರ್ಕಾರೇತರ ಸಂಸ್ಥೆಗಳು ನಡೆಸಲು ಮುಂದೆ ಬಂದಲ್ಲಿ ಅವರಿಗೆ ಅವಕಾಶ ಕಲ್ಪಿಸಬಹುದಾಗಿದೆ. ಈ ಕುರಿತು ಸಮೂಹ ಮಾಧ್ಯಮಗಳ ಮೂಲಕ ವ್ಯಾಪಕ ಪ್ರಚಾರ ಮಾಡಬೇಕು. ಮಕ್ಕಳ ಗಣತಿಯಲ್ಲಿ ಗುರುತಿಸಲಾದ ಶಾಲೆಯಿಂದ ಹೊರಗುಳಿದ ಮಕ್ಕಳಿಗೆ ಸಂಬಂಧಿಸಿದ ಎನ್.ಜಿ.ಓಗಳು ಚಿಣ್ಣರ ಅಂಗಳ ನಡೆಸಲು ಪ್ರಸ್ತಾವನೆ ಸಲ್ಲಿಸಬಹುದಾಗಿದೆ. ಗಣತಿಯಲ್ಲಿ ಗುರುತಿಸಿಲ್ಲದ ಮಕ್ಕಳಿದ್ದಲ್ಲಿ, ಸಂಬಂಧಿಸಿದ ಶಾಲಾ ಮುಖ್ಯ ಶಿಕ್ಷಕರು ಸಿ.ಆರ್.ಪಿ. ಮತ್ತು ಶಿಕ್ಷಣಾಧಿಕಾರಿಗಳು ದೃಢೀಕರಣದೊಂದಿಗೆ ಇಂತಹ ಮಕ್ಕಳನ್ನು ಪಟ್ಟಿಯಲ್ಲಿ ಸೇರಿಸಬಹುದಾಗಿದೆ. ಸೂಚಿತ ಅವಧಿಯೊಳಗೆ ಸ್ವೀಕೃತಿಯಾದ ಎನ್.ಜಿ.ಓ. ಪ್ರಸ್ತಾವನೆಗಳನ್ನು ಕೆಳಕಂಡ ಷರತ್ತುಗಳಂತೆ ಸಂಸ್ಥೆಗಳನ್ನು ಜಿಲ್ಲಾ ಆಯ್ಕೆ ಸಮಿತಿ ಮಾಡುವುದು. ಹಾಗೂ ಎನ್.ಜಿ.ಓ. ಯಾಚಿಸಿರುವ ಕಾರ್ಯತಂತ್ರದ ಮೊತ್ತ 10 ಲಕ್ಷದೊಳಗೆ ಇದ್ದರೆ ಕೇಂದ್ರ ನಡೆಸಲು ಅನುಮತಿಸಬಹುದು. ಈ ಮಿತಿಯನ್ನು ದಾಟಿದ್ದರೆ ಪ್ರಸ್ತಾವನೆಯನ್ನು ಜಿ.ಐ.ಎ.ಸಿಗೆ ಕಳುಹಿಸಬಹುದು.

- ಸಂಸ್ಥೆಯು ನೊಂದಾಯಿಸಲ್ಪಟ್ಟಿರಬೇಕು
- ಸಂಸ್ಥೆಯ ಸದಸ್ಯರ ಪಟ್ಟಿ
- ಸಂಸ್ಥೆಯು ಕಪ್ಪು ಪಟ್ಟಿಯಲ್ಲಿರಬಾರದು
- ಹಿಂದಿನ ಮೂರು ವರ್ಷಗಳ ಆಡಿಟ್ ವರದಿಯಂತೆ ಸಂಸ್ಥೆಯ ಯಾಚಿತ ಕಾರ್ಯತಂತ್ರಗಳನ್ನು ನಡೆಸಲು ಆರ್ಥಿಕವಾಗಿ ಸಬಲವಾಗಿದೆಯೆ ಎಂದು ನಿರ್ಧರಿಸತಕ್ಕದ್ದು.
- ಸಂಸ್ಥೆ ಪ್ರಸ್ತಾಪಿಸಿದ ಅಂಗಳದ ಸ್ಥಳ, ಮಕ್ಕಳ ವಿವರ ಹಾಗೂ ಅನುದಾನ ಮೊತ್ತದ ವಿವಿರ ಸಲ್ಲಿಸಿರಬೇಕು.

## 22. ಚಿಣ್ಣರ ಅಂಗಳದ ನಂತರ :

- ಚಿಣ್ಣರ ಅಂಗಳದ ಕೊನೆಯ ದಿನ ಸಮಾರಂಭವನ್ನು ಏರ್ಪಡಿಸಿ. ಮಕ್ಕಳು ತಯಾರಿಸಿದ ವಸ್ತುಗಳು ಹಾಗೂ ಚಿತ್ರಗಳ ಪ್ರದರ್ಶನವನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವುದರೊಂದಿಗೆ ಮಕ್ಕಳ ಪ್ರಗತಿಯನ್ನು ತಿಳಿಸಿ ಘೋಷಣಾ ಪ್ರಮಾಣ ಪತ್ರಗಳನ್ನು ವಿತರಿಸಬೇಕು.
- ಈ ಮಕ್ಕಳು ಔಪಚಾರಿಕ ಶಾಲೆಯ ಸೂಕ್ತ ತರಗತಿಗಳಿಗೆ ಸೇರಿಸುವ ವ್ಯವಸ್ಥೆಯನ್ನು ಸಂಬಂಧಿಸಿದ ಶಾಲೆಗಳ ಮುಖ್ಯ ಗುರುಗಳು, ಶಿಕ್ಷಕರು ಹಾಗೂ ಕ್ಲಸ್ಟರ್‌ನ ಸಿ.ಎ,ಇ.ಓ. ಮತ್ತು ಸಿ.ಆರ್.ಪಿ.ರವರು ಮಾಡಬೇಕು.
- ಚಿಣ್ಣರ ಅಂಗಳ ಕೇಂದ್ರಕ್ಕೆ ಅತ್ಯಂತ ಸಮೀಪದಲ್ಲಿರುವ ಕಿರಿಯ / ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯ ಶಿಕ್ಷಕರು ದಾಖಲಾತಿ ವಹಿಯೊಡನೆ ಕಡೆಯ ದಿನದ ಚಿಣ್ಣರ ಅಂಗಳದ ಸಮಾರಂಭದಲ್ಲಿ ಭಾಗವಹಿಸಿ, ಅದೇ ಸ್ಥಳದಲ್ಲಿ ಮಕ್ಕಳನ್ನು ದಾಖಲು ಮಾಡಿಕೊಳ್ಳಬೇಕು.
- ದಾಖಲಾತಿ ಪುಸ್ತಕದಲ್ಲಿ ಚಿಣ್ಣರ ಅಂಗಳದ ವಿಶೇಷ ದಾಖಲಾತಿ ಎಂದು ನಮೂದಿಸಬೇಕು. ಆದರೆ ಈಗಾಗಲೇ ಮಗು ಶಾಲೆಗೆ ಹಾಜರಾಗಿ ಶಾಲೆ ತೊರೆದಿದ್ದಲ್ಲಿ (6–14 ವಯಸ್ಸು) ಆ ಮಕ್ಕಳನ್ನು ಪುನಃ ಪ್ರವೇಶ ದಾಖಲೆಗೆ ಬರೆಯಬಾರದು.